ದೂರವಾಣಿ-0836-2215328 Phone : 0836-2215328

ಕರ್ನಾಟಕ ವಿಶ್ವವಿದ್ಯಾಲಯ
KARNATAK UNIVERSITY, DHARWAD
Scholarship Section
Email : scholarship@kud.ac.in

ನಂ.ಕವಿವಿ/ಶಿವೇ/2026/**887** ದಿನಾಂಕ: **11-11-2026**

-:ಸುತ್ತೋಲೆ:-

ವಿಷಯ:-ಪ್ರೊ. ಎ. ಎಂ. ಪಠಾಣ, ಸನ್ಮಾನ ಸಮಿತಿಯ ಪ್ರೊ. ಎ. ಎಂ. ಪಠಾಣ ಶಿಷ್ಯವೇತನ ಮಂಜೂರಾತಿಗಾಗಿ ಅರ್ಜಿ ಅಹ್ವಾನಿಸಿದ ಕುರಿತು

ಉಲ್ಲೇಖ:- 1) ಸಿಂಡಿಕೇಟ್ ನಿರ್ಣಯ ನಂ.28 ದಿನಾಂಕ: 09-06-2004.
2) ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ ನಂ.33 ದಿನಾಂಕ: 24-07-2004.
3) ಕುಲಪತಿಗಳ ಆದೇಶ ದಿನಾಂಕ: 06-11-2026

*****

ಸನ್ 2025-26ನೇ ಸಾಲಿಗೆ ಸ್ನಾತಕೋತ್ತರ ಪದವಿಯ ಪ್ರಥಮ ವರ್ಷಕ್ಕೆ (1 ಮತ್ತು 2ನೇ ಸೆಮಿಸ್ಟರ್‌ಗೆ) ಕಲಾ ನಿಖಾಯದ ಅಧ್ಯಯನಕ್ಕೆ ಪ್ರವೇಶ ಪಡೆದು ಸನ್ 2026-27ನೇ ಸಾಲಿಗೆ ಅಂತಿಮ (3 & 4ನೇ ಸೆಮಿಸ್ಟರ್‌ದಲ್ಲಿ) ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕರ್ನಾಟಕ ವಿಶ್ವವಿದ್ಯಾಲಯದ 2025-26ನೇ ಸಾಲಿನ ಒಳ್ಳೆಯ ವಿದ್ಯಾರ್ಥಿ' (Best Student) ಎಂದು ನಿರ್ಣಯಿಸಲ್ಪಡುವ ವಿದ್ಯಾರ್ಥಿಗೆ ಪ್ರೊ.ಎ.ಎಂ.ಪಠಾಣ ಶಿಷ್ಯವೇತನ ಮಂಜೂರು ಮಾಡಲು ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ.

1. ಕಲಾ ನಿಖಾಯದ ಸ್ನಾತಕೋತ್ತರ ಪ್ರಥಮ ವರ್ಷದ (1 ಹಾಗೂ 2ನೇ ಸೆಮಿಸ್ಟರ್) ಪದವಿಯನ್ನು 2025-26 ರಲ್ಲಿ ಪಾಸಾಗಿ ಪ್ರಸ್ತುತ ಸನ್ 2026-27ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಅಂತಿಮ ವರ್ಷದ ಸ್ನಾತಕೋತ್ತರ ಪದವಿಯಲ್ಲಿ (3ಮತ್ತು 4ನೇ ಸೆಮಿಸ್ಟರನಲ್ಲಿ) ಓದುತ್ತಿರುವ ವಿದ್ಯಾರ್ಥಿಗಳು ಈ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಬಹುದು.

<u>2.ಅರ್ಹತೆ:-</u>ಶಿಷ್ಯವೇತನಕ್ಕೆ ಈ ಕೆಳಗಿನ ಅರ್ಹತೆಗಳನ್ನಾಧರಿಸಿ ವಿದ್ಯಾರ್ಥಿಯನ್ನು ಆಯ್ಕೆ ಮಾಡಲಾಗುವುದು. ಅ) ವಿದ್ಯಾರ್ಹತೆ ಬ) ಇತರೆ ಚಟುವಟಿಕೆಗಳು ಕ) ವೈಯಕ್ತಿಕ ಸಂದರ್ಶನ

ಅ) ವಿದ್ಯಾರ್ಹತೆ: (Educational Qulification):- ಎಸ್.ಎಸ್.ಎಲ್.ಸಿ.ಯಿಂದ ಸ್ನಾತಕೋತ್ತರ ಪ್ರಥಮ ವರ್ಷದ ಪದವಿ (1st and 2nd Semester) ಯನ್ನು ಪ್ರಥಮ (1st Atttempt) ಯತ್ನದಲ್ಲಿ, ಪ್ರಥಮ (1st Class) ವರ್ಗದಲ್ಲಿ ಪಾಸಾಗಿರಬೇಕು.

ಬ) ಇತರೆ ಚಟುವಟಿಕೆಗಳು: (Extra-Curricular Activities):-ಇತರೆ ಚಟುವಟಿಕೆಗಳಲ್ಲಿ ಭಾಗವಹಿಸಿದ ಎಲ್ಲ ಪ್ರಮಾಣ ಪತ್ರಗಳನ್ನು ಸಲ್ಲಿಸುವುದು.

ಕ) ಸಂದರ್ಶನ: (Interview):- ಅರ್ಹ ವಿದ್ಯಾರ್ಥಿಗಳಿಗೆ ಮೌಖಿಕ ಸಂದರ್ಶನವನ್ನು ಸಂಬಂಧಿಸಿದ ಆಯ್ಕೆ ಸಮಿತಿಯಿಂದ ನಡೆಸಲಾಗುವದು.

<u>3. ಶಿಷ್ಯವೇತನ ಬಾಬತ್ತು ಮತ್ತು ಅವಧಿ:-</u>

ಆಯ್ಕೆಗೊಂಡ ವಿದ್ಯಾರ್ಥಿಗೆ ಪ್ರೊ. ಎ. ಎಂ. ಪಠಾಣ ಶಿಷ್ಯವೇತನ ದತ್ತಿ ನಿಧಿಯಿಂದ ಬರುವ ಫಾರ್ಷಿಕ ಬಡ್ಡಿಯಿಂದ ಗರಿಷ್ಠ ರೂ. 10,000/- (ತಿಂಗಳಿಗೆ ರೂ.1,000/- ರಂತೆ 10 ತಿಂಗಳ ಅವಧಿಗೆ) ಇಲ್ಲವೇ ಈ ದತ್ತಿ ನಿಧಿಯಿಂದ ಬರುವ ಬಡ್ಡಿಯನ್ನಾಧರಿಸಿ ಸಮಿತಿ ನಿರ್ಧರಿಸುವ ಮೊತ್ತ ಯಾವುದು ಕಡಿಮೆಯೋ ಅಷ್ಟನ್ನು ಮಾತ್ರ ಶಿಷ್ಯವೇತನ ನೀಡಲಾಗುವದು.

Contd...2....

4. ಅರ್ಜಿ ಸಲ್ಲಿಸುವ ವಿಧಾನ:-

1) ನಿಗದಿ ಪಡಿಸಿದ ಅರ್ಜಿಯನ್ನು ಶಿಷ್ಯವೇತನ ವಿಭಾಗದಿಂದ ಪಡೆದು, ಭರ್ತಿ ಮಾಡಿ, ಸಂಬಂಧಿಸಿದ ವಿಭಾಗದ ಮುಖ್ಯಸ್ಥರ ಸಹಿಯೊಂದಿಗೆ ದಿನಾಂಕ: 30-11-2026 ರೊಳಗಾಗಿ ಸಲ್ಲಿಸುವುದು.

2) ಅರ್ಜಿಯ ಜೊತೆಗೆ, (1)ಎಸ್.ಎಸ್.ಎಲ್.ಸಿ. (2)ಪಿ.ಯು.ಸಿ.(1st & 2nd Year) (3)ಸ್ನಾತಕ ಪದವಿ (1st to 6th Semesters) ಹಾಗೂ (4) ಸ್ನಾತಕೋತ್ತರ ಪದವಿಯ ಪ್ರಥಮ ವರ್ಷದ (1st & 2nd Semesters) ಅಂಕಪಟ್ಟಿಗಳ ದೃಢೀಕೃತ ಪ್ರತಿಗಳನ್ನು ಸಲ್ಲಿಸುವುದು ಹಾಗೂ ಇತರೆ ಚಟುವಟಿಕೆಗಳ (Extra-Curricular Activities) ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಗಳನ್ನು ಅಗತ್ಯವಾಗಿ ಸಲ್ಲಿಸುವುದು.

5. ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇಲೆ ವಿಶ್ವವಿದ್ಯಾಲಯ ಕೈಗೊಳ್ಳುವ ನಿರ್ಣಯವೇ ಅಂತಿಮವಾಗಿರುತ್ತದೆ.

Sd/-
ಕುಲಸಚಿವರು

ಪ್ರತಿ ಸಾದರಪೂರ್ವಕವಾಗಿ:-

1. ಕಲಾ ನಿಖಾಯದ ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳು, ಕ.ವಿ.ವಿ. ಧಾರವಾಡ.
2. ಸಂಯೋಜಕರು ಕ.ವಿ.ವಿ. ಸ್ನಾತಕೋತ್ತರ ಕೇಂದ್ರ ಕಾರವಾರ/ ಗದಗ.
   (ಈ ವಿಷಯವನ್ನು 2026-27ನೇ ಸಾಲಿನಲ್ಲಿ ಅಂತಿಮ ವರ್ಷದ ಸ್ನಾತಕೋತ್ತರ ಪದವಿಯಲ್ಲಿ (3 ಮತ್ತು 4ನೇ ಸೆಮಿಸ್ಟರ) ಓದುತ್ತಿರುವ ವಿದ್ಯಾರ್ಥಿ/ನಿಗಳ ಗಮನಕ್ಕೆ ತಪ್ಪದೆ ತರಲು ಹಾಗೂ ಅರ್ಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವಂತೆ ತಿಳಿಸಲು ಕ್ರಮಕೈಗೊಳ್ಳಬೇಕೆಂದು ಕೋರಲಾಗಿದೆ.
3. ಪ್ರೊ. ಎ. ಎಂ. ಪಠಾಣ, ಸನ್ಮಾನ ಸಮಿತಿಯ ಸಂಯೋಜಕರು,
   ಅ) ಡಾ. ಕೆ. ಗೌಡರೆಡ್ಡಿ, ನಿವೃತ್ತ ಪ್ರಾಧ್ಯಾಪಕರು, ಕಲ್ಯಾಣ ನಗರ, ಧಾರವಾಡ.
   ಬ) ಪ್ರೊ. ಅಬ್ದುಲ್ ಕರೀಂ, ಮಾಜಿ ಸಿಂಡಿಕೇಟ್ ಸದಸ್ಯರು, ನವನಗರ, ಹುಬ್ಬಳ್ಳಿ ಇವರ ಮಾಹಿತಿಗಾಗಿ.
4. ವಿತ್ತಾಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
5. ನಿರ್ದೇಶಕರು, ಐಟಿ ವಿಭಾಗ, ಕ.ವಿ.ವಿ. ಧಾರವಾಡ.
6. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
7. ಕುಲಸಚಿವರ ಆಪ್ತ ಸಹಾಯಕರು, ಕ.ವಿ.ವಿ. ಧಾರವಾಡ.

<u>ಮರು ನಿವೇದನೆ:</u>

ಪ್ಯಾರಾ ನಂ.652 ರ ಮಾನ್ಯ ಕುಲಪತಿಗಳ ಆದೇಶದ ದಿನಾಂಕ 18.11.2022 ರನ್ವಯ ಸನ್ 2021–22 ನೇ ಸಾಲಿನ **Best Student** ಎಂದು ನಿರ್ಣಯಿಸಲ್ಪಡುವ ವಿದ್ಯಾರ್ಥಿಗೆ ಪ್ರೊ. ಎ. ಎಂ.ಪಠಾಣ ಶಿಷ್ಯವೇತನ ಮಂಜೂರು ಮಾಡಲು ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದ ಕುರಿತು ವಿದ್ಯಾರ್ಥಿಗಳ ಗಮನಕ್ಕೆ ತರಲು ತಯಾರಿಸಿದ ಸುತ್ತೋಲೆಯನ್ನು ತಮ್ಮ ಒಪ್ಪಿಗೆಗಾಗಿ ಹಾಗೂ ಸಹಿಗಾಗಿ ಮಂಡಿಸಲಾಗಿದೆ.

ಅಧೀಕ್ಷಕರು:

ಸ.ಕುಲಸಚಿವರು:

ಕುಲಸಚಿವರು:

KARNATAK UNIVERSITY, DHARWAD
SCHOLARSHIP SECTION

APPLICATION FOR AWARD OF "PROF.A.M.PATHAN" SCHOLARSHIP
(Best Student for the Year 2025-26)

1. Name of the applicant (In block letters with surname) mobile number	_____ _____ _____ _____	
2. Date of Birth	_____	
3. Name of the Dept. where the candidate is studying Final Year P.G.Degree (3rd & 4th Semester)	_____	
4. i) Academic Performnce		
Name of the Exam passed	**Year of passing**	**Percentage of marks**
1) S.S.L.C.		
2) PUC I st Year II nd Year	_____ _____	_____ _____
3) Bachelor Degree		
4) P.G. 1st & 2nd Semester		

Note: Attested copy of the marks cards of above exam should be enclosed

ii) Extra curricular Activities (Information in brief should be mentioned and copy of the Certificates if any be enclosed.

5) <u>DECLARATION BY THE CANDIDATE</u>

(1) I shall complete my final year P.G.degree in the mandatory minimum tenure of the scholarship, if the same is paid to me before completion of the degree.

Date:_____ **Signature of the Candidate**

6) <u>FOR USE OF DEPARTMENT</u>:

This is Certify that Shri/Smt._____ _____ is the bonafide student of this department and is studying in _____ Final Year (III rd & IV th Semesters) P.G. Course of the University He/She has good academic performance & active extra curricular activities. He/She bears good/moral behavior and has also good/friendly relations with the students and staff members.

Date:_____ **Singnature of the Chairman**

E-8397

KARNATAK UNIVERSITY, DHARWAD
SCHOLARSHIP SECTION

PROF.A.M.PATHAN"
Best Student SCHOLARSHIP

Faculties by Rotation:

a. **Science**
b. **Social Science**
c. **Arts (Languages, Music……)**
d. **Law, Commerce, Education and Management.**

1) ಸಿಂಡಿಕೇಟ್ ನಿರ್ಣಯ ನಂ.28 ದಿನಾಂಕ: 09-06-2004.
2) ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ ನಂ.33 ದಿನಾಂಕ: 24-07-2004.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಶಿಷ್ಯವೇತನ ವಿಭಾಗ

ಟಿಪ್ಪಣಿ ಪುಟ ಸಂಖ್ಯೆ : _____ ದಿನಾಂಕ : **02.11.2026**
ಕಡತ ಸಂಖ್ಯೆ : _____ ಪುಟ ಸಂಖ್ಯೆ : **___-136-___**

'A' Grade NAAC Accredited 2008

ವಿಷಯ: ಪ್ರೋ. ಎ ಎಂ. ಪಠಾಣ Best Student ಶಿಷ್ಯವೇತನ ಮಂಜೂರಾತಿಗಾಗಿ

ನಿವೇದನೆ:

770. ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಯ ಅಂತಿಮ ವರ್ಷಕ್ಕೆ (3 ಮತ್ತು 4ನೇ ಸೆಮಿಸ್ಟರ) ಓದನ್ನು ಮುಂದುವರೆಸಿದ ವಿದ್ಯಾರ್ಥಿಗಳಿಗೆ ಪ್ರೋ. ಎ.ಎಂ. ಪಠಾಣ (Best Student) ಶಿಷ್ಯವೇತನವನ್ನು ಪ್ರದಾನ ಮಾಡಲು ಸ್ಥಾಪಿಸಲಾಗಿದೆ. ಸದರಿ ಶಿಷ್ಯವೇತನವನ್ನು ಸರದಿಯಂತೆ (Rotation) 1). ವಿಜ್ಞಾನ, 2). ಸಮಾಜ-ವಿಜ್ಞಾನ, 3). ಕಲಾ, 4). ಕಾನೂನು/ ವಾಣಿಜ್ಯ/ ಶಿಕ್ಷಣ ಮತ್ತು ಮ್ಯಾನೇಜಮೆಂಟ್ ನಿಖಾಯಗಳ ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲಾಗುವುದು. (Rule Copy Flag-A)

771. ಪ್ರಸ್ತುತ ಸಾಲಿನಲ್ಲಿ ಜರುಗುವ 2025-26ನೇ ಸಾಲಿನ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಪ್ರತಿವರ್ಷದಂತೆ ಪ್ರೋ. ಎ.ಎಂ. ಪಠಾಣ ಶಿಷ್ಯವೇತನವನ್ನು ಪ್ರದಾನ ಮಾಡಲು ಸರದಿಯಂತೆ (Rotation) **ಕಲಾ(Arts**(Languages, Music.....)) ನಿಖಾಯದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಬೇಕಾಗುವುದರಿಂದ ಸದರಿ ಶಿಷ್ಯವೇತನದ ನಿಯಮಾನುಸಾರ ಸ್ನಾತಕೋತ್ತರ ಪದವಿಯ ಪ್ರಥಮ ವರ್ಷದ ಓದನ್ನು ಸನ್ 2025-26ನೇ ಸಾಲಿನಲ್ಲಿ ಪಾಸಾಗಿ, ಸನ್ 2026-27 ನೇ ಸಾಲಿಗೆ ಅಂತಿಮ ವರ್ಷಕ್ಕೆ (3 & 4ನೇ ಸೆಮಿಸ್ಟರ) ಪ್ರವೇಶ ಪಡೆದ ವಿದ್ಯಾರ್ಥಿಗಳಿಂದ ಅರ್ಜಿ ಸಲ್ಲಿಸಲು ಅವಕಾಶವಿರುವುದು, ಅದರಂತೆ ಆಯ್ಕೆ ಸಮಿತಿಯು ಬಂದಂತ ಅರ್ಜಿಗಳನ್ನು ಪರಿಶೀಲಿಸಿ ಮೌಖಿಕ ಸಂದರ್ಶನ ನಡೆಸಿ ಅಂತಿಮ ವರದಿಯನ್ನು ಸಲ್ಲಿಸುವುದು.

772. ಕಾರಣ ವಿಶ್ವವಿದ್ಯಾಲಯದ ಸಮಾಜ-ವಿಜ್ಞಾನ ನಿಖಾಯದ ಸ್ನಾತಕೋತ್ತರ ವಿಭಾಗಗಳಿಗೆ ಸದರಿ ಶಿಷ್ಯವೇತನಕ್ಕೆ ಅರ್ಜಿ ಆಹ್ವಾನಿಸಿದ ಕುರಿತು ಸುತ್ತೋಲೆ ಹೊರಡಿಸಲು ತಮ್ಮ ಒಪ್ಪಿಗೆಗಾಗಿ ಹಾಗೂ ಪ್ಯಾರಾ **ನಂ. 722** ರ ಮಾನ್ಯ ಕುಲಪತಿಗಳ ಆದೇಶದಂತೆ ಪ್ರೊ. ಎ. ಎಮ್. ಪಠಾಣ ಶಿಷ್ಯವೇತನ ಆಯ್ಕೆ ಸಮಿತಿಯನ್ನು ಪುನರ್ ರಚಿಸಲು ಸಮಿತಿ ಸದಸ್ಯರಿಗೆ ಪತ್ರದ ಮುಖಾಂತರ ಕೋರಲಾಗಿತ್ತು ಆದರೆ ಈವರೆಗೂ ಸಮಿತಿ ಸದಸ್ಯರಿಂದ ಮಾಹಿತಿ ಸ್ವೀಕೃತವಾಗಿರುವುದಿಲ್ಲ ಕಾರಣ ಮತ್ತೋಮ್ಮೆ ಆಯ್ಕೆ ಸಮಿತಿ ಸದಸ್ಯರಿಗೆ ಸಮಿತಿಯನ್ನು ಪನರ್ ರಚಿಸಿ ಪೂರೈಸುವಂತೆ ಪತ್ರದ ಮುಖಾಂತರ ಕೋರಲು ತಮ್ಮ ಅನುಮೋದನೆಗಾಗಿ ನಿವೇದಿಸಲಾಗಿದೆ.

773. ಒಪ್ಪಿದ್ದಲ್ಲಿ ಪ್ರೋ. ಎ. ಎಮ್. ಪಠಾಣ (Best Student) ಶಿಷ್ಯವೇತನವನ್ನು ಪಡೆಯಲು ಅರ್ಜಿ ಸಲ್ಲಿಸುವಂತೆ **ಕಲಾ(Arts**(Languages, Music.....)) ನಿಖಾಯದ ಸ್ನಾತಕೋತ್ತರ ಅಧ್ಯಯನದ ವಿದ್ಯಾರ್ಥಿಗಳಿಗೆ ತಿಳಿಸಲು ತಯಾರಿಸಲಾದ ಸುತ್ತೋಲೆಯನ್ನು ತಮ್ಮ ಸಹಿಗಾಗಿ ಮಂಡಿಸಲಾಗಿದೆ.

774. ಅಧೀಕ್ಷಕರು:

775. ಸ. ಕುಲಸಚಿವರು:

776. ಕುಲಸಚಿವರು:

777. ಕುಲಪತಿಗಳು:

<u>ನಿವೇದನೆ:</u>

746. ಪ್ಯಾರಾ ನಂ. 742 ರ ಮಾನ್ಯ ಕುಲಪತಿಗಳ ಅನುಮೋದನೆಯಂತೆ ಸನ್ 2024-25ನೇ ಸಾಲಿನ ಪ್ರೊ. ಎ. ಎಂ. ಪಠಾಣ (Best Student) ಶಿಷ್ಯವೇತನ ಮಂಜೂರ ಮಾಡಲು ಸಮಾಜ-ವಿಜ್ಞಾನ ನಿಖಾಯದ ಸ್ನಾತಕೋತ್ತರ ಅಧ್ಯಯನದ ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸುವಂತೆ ದಿನಾಂಕ: 13.03.2026 ರಂದು ಸುತ್ತೋಲೆ ಹೊರಡಿಸಲಾಗಿತ್ತು.

747. ಮುಂದುವರೆದು ಸದರಿ ಸುತ್ತೋಲೆ ಅನುಸಾರ ಒಟ್ಟು 09 ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅರ್ಜಿಗಳನ್ನು ಸಲ್ಲಿಸಿದ ವಿದ್ಯಾರ್ಥಿಗಳ ವಿವರದ ಕೋಷ್ಟಕವನ್ನು ತಯಾರಿಸಿ ಕಡತದಲ್ಲಿ ಲಗತ್ತಿಸಲಾಗಿದೆ. (Flag-A)

748. ಪ್ರೊ. ಎ. ಎಂ. ಪಠಾಣ (Best Student) ಶಿಷ್ಯವೇತನ ಮಂಜೂರ ಮಾಡಲು ರೂಪಿಸಿದ ನಿಯಮ **5(e)**ದಲ್ಲಿ ಈ ಕೆಳಗಿನಂತೆ ಸಮಿತಿಯನ್ನು ರಚಿಸಲು ಸೂಚಿಸಿರುವರು. (ನಿಯಮದ ಪ್ರತಿ Flag-B)

1. **Dean of Faculties.**
2. **One representative of the Committee of Prof. A. M. Pathan's Felicitation Committee (as per the list shown in the rules governing the award) to be nominated by the Hon'ble Vice-Chancellor.**
3. **Hon'ble Vice-Chancellor or his nominee as a Chairman of the Selection Committee.**

749. ಕಾರಣ ಸನ್ 2024-25ನೇ ಸಾಲಿನ ಪ್ರೊ. ಎ. ಎಂ. ಪಠಾಣ (Best Student) ಶಿಷ್ಯವೇತನ ಮಂಜೂರ ಮಾಡಲು ನಿಯಮಾನುಸಾರ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರ ಹೆಸರನ್ನು ಸೂಚಿಸುವಂತೆ ಸದರ ಕಡತವನ್ನು ಮಂಡಿಸಲಾಗಿದೆ.

750. ಅಧೀಕ್ಷಕರು:

751. ಸ. ಕುಲಸಚಿವರು:

752. ಕುಲಸಚಿವರು: